ಹಂಬಲ ಕಾಡುತ್ತಿತ್ತು. ಆದರೆ ಅರಿಝೋನಾ ಅಲ್ಲಿಂದ ತುಂಬಾ ದೂರ, ಇವರ ಸಮಯ ಸಂದರ್ಭ ಹೇಗೋ ಎಂಬ ಸಂಕೋಚ ಬಾಯಿ ಕಟ್ಟಿಸುತ್ತಿತ್ತು. ಎರಡು ವಾರಕ್ಕೆ ಇದ್ದಕ್ಕಿದ್ದಂತೆ ಆರೋಗ್ಯ ಕೈಕೊಟ್ಟಿತು. ಉಸಿರಾಡುವುದು ಕಷ್ಟವಾಗಿ ಸಣ್ಣ ಜ್ವರ ಬಂತು. ಶ್ವಾಸಕೋಶದಲ್ಲಿ ನೀರು ತುಂಬಿದೆ, ನ್ಯುಮೋನಿಯ ಅಂದರು ಡಾಕ್ಟರು. ಅಮೆರಿಕದಲ್ಲಿ ವೈದ್ಯಕೀಯ ವೆಚ್ಚ ಭಾರ. ಪ್ರವಾಸಿಗರಾಗಿ ಬಂದ ಇವರಿಗೆ ವೈದ್ಯಕೀಯ ವಿಮೆಯಿಲ್ಲದ್ದಕ್ಕೆ ಡಾಲರುಗಳು ಧಾರಾಳ ಕೈಬಿಡತೊಡಗಿದ್ದಲ್ಲದೇ ಆಸ್ಪತ್ರೆಗೆ ಕರೆದೊಯ್ಯುವುದಕ್ಕೆ ಮತ್ತೊಂದಕ್ಕೆ ಅಂತ ರಜೆ ಹಾಕುವ ಒತ್ತಡ ಪರದಾಟಕ್ಕೆ ಸಿಲುಕಿಸಿತು. ಎಷ್ಟೇ ತೋರಿಸಿಕೊಳ್ಳಬಾರದು ಅಂದರೂ ಪ್ರಶಾಂತನ ಹಣೆಯ ಮೇಲೆ ಗೆರೆಗಳು ಮೂಡುವುದನ್ನು ತಪ್ಪಿಸಲಾಗಲಿಲ್ಲ. ರುಕ್ಮಿಣಿಯ ಒಳ ಒತ್ತಡ ಕಣ್ಣುಗಳಲ್ಲಿ ಸೂಸುತ್ತಿತ್ತು. ಒಂದು ಹಂತಕ್ಕೆ ಚೇತರಿಕೆಯಾಗುತ್ತಿದ್ದಂತೆ 'ಈಗ ನಾವು ಭಾರತಕ್ಕೆ ಹೋಗ್ಬಿಡತೇವಮ್ಮ... ಆಮೇಲೆ ಮತ್ತೆ ನೋಡಿದ್ರಾಯಿತು...' ಅಮ್ಮ ಹೇಳಿದಾಗ, ಮೂರುತಿಂಗಳಿಗೇಂತ ಬಂದ ಅಪ್ಪ ಅಮ್ಮ ಒಂದು ತಿಂಗಳಿಗೇ, ಅದೂ ಸತ್ಯಭಾಮಾಳ ಮನೆಗೆ ಹೋಗದೆ ಮರಳುವಂತಾಗಿದ್ದಕ್ಕೆ ರುಕ್ಮಿಣಿಯ ಕಣ್ಣು ಆರ್ದ್ರವಾಯಿತು. 'ರುಕ್ಕು, ಇಲ್ಲಿನ ಹವೆ ಒಗ್ಗಿಲ್ಲಾಂತ ಕಾಣುತ್ತೆ. ಈ ಪರಿಸ್ಥಿತೀಲಿ ಅವರು ಹೇಳಿದ್ದೇ ಸರಿಯೇನೋ ಅಲ್ವ? ಊರಿನ ಹವೇಲಿ ಎಲ್ಲಾ ಸರಿ ಹೋಗ್ಬಹುದೇನೋ...' ಎಂದ ಪ್ರಶಾಂತ. ಈಗಾಗಲೇ ಎರಡು ಲಕ್ಷದ ಮೇಲೆ ಕೈಬಿಟ್ಟಿದೆ, ಅಲ್ಲದೇ ಇಲ್ಲಿ ಮತ್ತೇನಾದರೂ ಆದರೆ ಎಂಬ ಯೋಚನೆಗಳ ತುಯ್ದಾಟದಲ್ಲಿರುವ ಅವನ ಮುಖವನ್ನು ನೋಡಿದವಳಿಗೆ ಏನೂ ಹೇಳಲಾಗಲಿಲ್ಲ. ಆದರೆ ಅವಳಿಗನಿಸುತ್ತಿತ್ತು, ಇದು ಪರಿಹಾರವಲ್ಲ, ಭಾರತಕ್ಕೆ ಮರಳಿದಮೇಲೂ ಹೀಗೆಲ್ಲಾ ಆದರೆ ತಾವಲ್ಲದೆ ಅವರಿಗೆ ಯಾರಿದ್ದಾರೆ? ವಯಸ್ಸು ಹೆಚ್ಚಾಗುತ್ತದೆಯೇ ವಿನಃ ಕಮ್ಮಿಯಾಗುವುದಿಲ್ಲ ಎಂಬ ವಾಸ್ತವಗಳು ತಳಮಳವನ್ನು ಕೆರಳಿಸಿದವು. ತಳಿಪ್ಪರಂಬದ ಮೂಲಮನೆಯನ್ನು ಮಾರಿಸಿ ಬಾಲ್ಯದಿಂದಲೂ ಬಲ್ಲ ಬೆಂಗಳೂರಿನಲ್ಲಿ ಬ್ಯಾಂಕು, ದಿನಸಿ ಅಂಗಡಿ, ಔಷಧದಂಗಡಿ, ಆಟೊ ಸಿಗುವ ಜಾಗ ಎಲ್ಲಾ ಹತ್ತಿರವಿರುವಂತಲ್ಲಿ ಹುಡುಕಿ, ಎರಡು ಬೆಡ್‌ರೂಮಿನ ಫ್ಲಾಟು ಖರೀದಿಸಿ ಎಲ್ಲಾ ವ್ಯವಸ್ಥೆ ಮಾಡಿದ್ದೇ ಊರಲ್ಲಿ ನೋಡಲು ಯಾರೂ ಇಲ್ಲ ಎಂಬುದಕ್ಕಾಗಿತ್ತು. ಅಕ್ಕ, ತಂಗಿಯಿರಬ್ಬರೂ ಅಮೆರಿಕ ಸೇರಿಬಿಟ್ಟಿದ್ದೇವೆ. ಒಳ್ಳೇ ಆದಾಯದ ಕೆಲಸ. ಮುಂದೆ ಮಕ್ಕಳ ಭವಿಷ್ಯವನ್ನೂ ನೋಡಬೇಕು. ಸಮಸ್ಯೆಗಳ ಊಹೆ ದೈತ್ಯರಂತೆ ದುಡಿಯಲು ಹಚ್ಚುತ್ತದೆ. ಅಂತಹ ಪ್ರಯತ್ನ ಬೇರೆ ಸಮಸ್ಯೆಗಳನ್ನು ಸೃಷ್ಟಿಸುತ್ತದೆ.

ಏರ್ ಫ್ರಾನ್ಸ್‌ನ ಟಿಕೆಟ್ ತೆಗೆದು, ಎಲ್ಲಾ ವಿವರಗಳನ್ನು ಮತ್ತೆ ಮತ್ತೆ ಕೊಟ್ಟು, ಔಷಧ ಕಾಗದ ಪತ್ರಗಳನ್ನೆಲ್ಲಾ ಎರಡೆರಡು ಸಾರಿ ಪರಿಶೀಲಿಸಿ ಎಚ್ಚರಿಕೆ ಕೊಟ್ಟು ಕಾಳಜಿಯಿಂದ ಬೀಳ್ಕೊಟ್ಟರು. 'ಯಾಕೆ ಇಷ್ಟು ಹೆದ್ರತೀರ... ನಾನು ಮೊದ್ಲೂ ಫಾರಿನ್‌ನಲ್ಲಿದ್ದವನೆ. ಐ ಕ್ಯಾನ್ ಮ್ಯಾನೇಜ್' ಮೆನನ್ ಅಂದರು. ಇಬ್ಬರು ವೃದ್ಧರು ಟ್ರಾಲಿಯನ್ನು ತಳ್ಳಿಕೊಂಡು ಒಳಹೋಗಿ, ಗಾಜಿನ ಬಾಗಿಲು ಮುಚ್ಚಿ ಮರೆಯಾದರು. ವಿಮಾನ ಪ್ಯಾರಿಸಿಗೆ ಬಂದು ಅಲ್ಲಿ ಏರ್ ಫ್ರಾನ್ಸ್‌ನ ನೇರ ಬೆಂಗಳೂರಿಗೆ ಹೋಗುವ ಇನ್ನೊಂದು ವಿಮಾನಕ್ಕೆ ಬದಲಿಸಿಕೊಳ್ಳಬೇಕಿತ್ತು. ಪ್ಯಾರಿಸಿನಲ್ಲಿ ವಿಮಾನದಿಂದಿಳಿದವರು ಮೊದಲೆ ನಿಗದಿಪಡಿಸಿದ ಗೇಟಿಗೆ ಹೋದರು. ಅಲ್ಲಿ ಏನೋ ಗೊಂದಲ ನಡೆಯುತ್ತಿತ್ತು. ಅಧಿಕಾರಿಯೊಬ್ಬ ಇವರ ಟಿಕೆಟ್ ನೋಡಿದವ ಫ್ರೆಂಚ್‌ನಲ್ಲಿ ಏನೇನೋ ಹೇಳತೊಡಗಿದ. ಮೆನನ್ ಇಂಗ್ಲೀಷಿನಲ್ಲಿ ಹೇಳಿದ್ದೊಂದನ್ನೂ ಮನಸಿಗೆ ತೆಗೆದುಕೊಳ್ಳದೆ ಒಂದು ಸ್ಲಿಪ್‌ನಲ್ಲಿ ಎರಡು ನಂಬರುಗಳನ್ನು ಬರೆದುಕೊಟ್ಟು ವಿನಯದಿಂದ ಒಂದು ಕೌಂಟರಿನತ್ತ ಕೈ